ದಿನಾಂಕ 23-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1, 2, 4, 6, 7, 9, 10 ಹಾಗೂ 26 ನೇ ಪ್ರತಿವಾದಿಯರ ಪರ ಶ್ರೀ ಯು.ಎಸ್.ಕೆ., ವಕೀಲರಿಂದಃ

ನ್ಯಾಯಾಲಯದಿಂದ ನೋಟೀಸು ಬಂದ ಪ್ರಕಾರ ಸಾಕ್ಷ್ಯ ನುಡಿಯಲು ಹಾಜರಾಗಿರುತ್ತೇನೆ. ನಾನು ನೋಟೀಸು ಬಂದ ನಂತರ ಬಿ.ಬಿ.ಆರ್ ವಕೀಲರನ್ನು ಭೇಟಿಯಾಗಿ ಸಾಕ್ಷ್ಯ ಪ್ರಮಾಣ ಪತ್ರ ತಯಾರಿಸಿರುತ್ತೇನೆ. ಸದರಿ ವಕೀಲರನ್ನು ಭೇಟಿಯಾಗಲು ನನಗೆ ಯಾರೂ ತಿಳಿಸಿರಲಿಲ್ಲ. ನನ್ನ ಸಾಕ್ಷ್ಯಪ್ರಮಾಣ ಪತ್ರವನ್ನು ನಾನೇ ಮಾಹಿತಿ ನೀಡಿ ತಯಾರಿಸಿರುತ್ತೇನೆ.

2. ನಾನು ವಾದಿ ನಂಬ್ರ.1 ಬಿ ರವರನ್ನು 2014 ರಲ್ಲಿ ಮದುವೆಯಾಗಿರುತ್ತೇನೆ. ನಾನು ಕ್ರಿಶ್ಚಿಯನ್ ಧರ್ಮದ ಅನುಯಾಯಿ ಎಂದರೆ ಸರಿ. ನನಗೆ ಸುಮಾರು 2012 ರಿಂದ ನನ್ನ ಹೆಂಡತಿಯ ಪರಿಚಯ ಇತ್ತು. ನನ್ನ ಮೂಲ ಮನೆ ಪರಾರಿಗುಡ್ಡೆ, ಉಪ್ಪೂರಿನಲ್ಲಿ ಇರುತ್ತದೆ. ಸದರಿ ಆಸ್ತಿ ಹಾಗೂ ದಾವಾ ಆಸ್ತಿಗಳ ನಡುವೆ ಸುಮಾರು 6 ಕಿ.ಮೀ ಅಂತರ ಇರಬಹುದು. ನನಗೆ ದಾವಾ ಆಸ್ತಿಗಳ ಬಗ್ಗೆ ನನ್ನ ಮದುವೆಯ ನಂತರ ತಿಳಿದುಬಂತು. ವಾದಿಯರು ಈ ಪ್ರಕರಣದಲ್ಲಿ ತಮ್ಮ ಪಾಲಿನ ಹಕ್ಕನ್ನು ನಿವೃತ್ತಿಯಾಗಿ ಕೇಳಿರುತ್ತಾರೆ. ದಾವಾ ಆಸ್ತಿಗಳ ಬಗ್ಗೆ ನನಗೆ ನನ್ನ ಮಾವನಿಂದ ಮಾಹಿತಿ ಬಂದಿರುತ್ತದೆ. ಪ್ರತಿವಾದಿಯರು ವಿಭಾಗ ಪತ್ರ ಆಗಿದೆ ಎಂದು ಸಾಧಿಸುತ್ತಿದ್ದಾರೆ. ನನಗೆ ನನ್ನ ಮಾವ ತಿಳಿಸಿದ ವಿಷಯದ ಬಗ್ಗೆ ಮಾತ್ರ ಅನುಭವ ಇರುತ್ತದೆ.

3. ದಾವಾ ಆಸ್ತಿ ಅಳಿಯ ಸಂತಾನ ಕುಟುಂಬದ ಪರವಾಗಿ ಬಂದಿರುತ್ತದೆ. ಈ ವಿಷಯ ನನಗೆ ನನ್ನ ಮಾವ ತಿಳಿಸಿರುತ್ತಾರೆ. ದಾವೆ ಡಿಕ್ರಿಯಾದರೆ ನನ್ನ ಹೆಂಡತಿಗೆ ಲಾಭ ಆಗುತ್ತದೆ ಎಂದರೆ ಸಾಕ್ಷಿ, ಆಕೆಗೆ ಸಿಗಬೇಕಾದ ಹಕ್ಕಿನ ಬಗ್ಗೆ ದಾವೆ ಇದೆ ಎನ್ನುತ್ತಾರೆ. ನನ್ನ ಹೆಂಡತಿಗೆ ಲಾಭ ಮಾಡಿಕೊಳ್ಳಲು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಆಸ್ತಿ ಒಟ್ಟು ವಿಸ್ತೀರ್ಣ 4 ಎಕರೆ 3 ಸೆಂಟ್ಸ್ ಇರುತ್ತದೆ. 2015 ರಲ್ಲಿ ದಾವಾ ಆಸ್ತಿಯ 17 ಸೆಂಟ್ಸ್ ಆಸ್ತಿಗೆ ರೂ.1,95,000/- ಮೌಲ್ಯ ಇತ್ತು ಎಂದರೆ ನನಗೆ ಮಾಹಿತಿ ಇಲ್ಲ. ಪ್ರತೀ ಸೆಂಟ್ಸ್ ಗೆ ರೂ.12,000/- ಮೌಲ್ಯ ಇದ್ದ ಕಾರಣ ನಾನು ಮುಖ್ಯ ವಿಚಾರಣೆಯಲ್ಲಿ ಕಾಣಿಸುವ ಒಪ್ಪಿಗೆ ಪತ್ರ ನಂಬಲರ್ಹವಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ವಾದಿಯರು ಸುಳ್ಳು ಕಟ್ಟುಕಥೆ ಕಟ್ಟಿ ಅಕ್ರಮ ಲಾಭ ಮಾಡಲು ಹವಣಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಸಾಧಿಸುವ ಒಪ್ಪಿಗೆ

ಪತ್ರವನ್ನು ನಾನು ಹಾಗೂ ವಾದಿಯರು ಸೇರಿಕೊಂಡು ಸುಳ್ಳಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಒಪ್ಪಿಗೆ ಪತ್ರಕ್ಕೂ, 1 ನೇ ಪ್ರತಿವಾದಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಒಪ್ಪಿಗೆ ಪತ್ರಕ್ಕೆ ಯಾವುದೇ ಪಕ್ಷಗಾರರ ಮತ್ತು ಸಾಕ್ಷಿದಾರರ ಸಹಿ ಇರುವುದಿಲ್ಲ ಎಂದರೆ ಸದರಿ ದಾಖಲೆಗೆ ನನ್ನ ಮಾವನವರ ಒಪ್ಪಿಗೆ ಇರಲಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿ ರಾಜಿಗೋಸ್ಕರ ಯಾವತ್ತೂ ನಮ್ಮನ್ನು ಸಂಪರ್ಕಿಸಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಸದರಿ ಒಪ್ಪಿಗೆ ಪತ್ರ ದಿನಾಂಕ 26-10-2016 ಎನ್ನುವ ದಾಖಲಾತಿ ಯಾವುದೇ ಪಕ್ಷಗಾರರ ಸಹಿ ಇಲ್ಲದೇ ಇದ್ದ ಕಾರಣ ನಿಶಾನೆಗೊಳಪಡದೇ ಕಡತದಲ್ಲಿ ಇರುವುದನ್ನು ಗಮನಿಸಿ ನ್ಯಾಯಾಲಯದ ಪರಿಶೀಲನೆಗಾಗಿ ಮಾತ್ರ ಸದರಿ ದಾಖಲಾತಿಯನ್ನು ನಿಸಿ.1 ಎಂದು ಗುರುತಿಸಲಾಗಿದೆ.

5. ನಿಸಿ.1 ನ್ನು ಯಾವತ್ತೂ 1 ನೇ ಪ್ರತಿವಾದಿಯವರು ಮಧ್ಯಸ್ಥರಗಾರರ ಮೂಖಾಂತರ ವಾದಿಗೆ ಕಳುಹಿಸಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಯಾವತ್ತೂ ರಾಜಿಯ ಬಾಬ್ತು ತೊಂಬತ್ತು ಲಕ್ಷ ನೀಡುವುದಾಗಿ ಒಪ್ಪಿರಲಿಲ್ಲ ಎಂದರೆ ಸರಿಯಲ್ಲ. ನಿಸಿ.1 ನ್ನು ವಿಶ್ವನಾಥ ಶೆಟ್ಟಿ ವಕೀಲರು ತಯಾರಿಸಿರಬಹುದು ಎಂದು ನನ್ನ ಮಾವನ ಅನುಮಾನ ವ್ಯಕ್ತಪಡಿಸಿದ್ದರು. ನನ್ನ ಮಾವನವರು ತಿಳಿಸಿದಂತೆ ಸದರಿ ಸಂಗತಿಯನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದೇನೆ. ನನ್ನ ಹೆಂಡತಿಯ ಹಿತಾಸಕ್ತಿಗಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದ ಪ್ರತಿವಾದಿಯರ ಪರ ವಕೀಲರು ಗೈರು ಹಾಜರಾಗಿದ್ದು, ಸದರಿಯವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು).

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಉಡುಪಿ.